ಕರ್ನಾಟಕ ವಿಧಾನ ಪರಿಷತ್ತು

01	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1300
02	ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು	:	ಶ್ರೀ. ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)
03	ಉತ್ತರಿಸುವ ದಿನಾಂಕ	:	21-12-2018
04	ಉತ್ತರಿಸುವ ಸಚಿವರು.	:	ಉಪ ಮುಖ್ಯಮಂತ್ರಿರವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೆಂಗಳೂರಿನ ಶಿವಾಜಿನಗರದ ರುದ್ರೇಶ್ ಕೊಲೆಯ ಪ್ರಕರಣದ ತನಿಖೆ ಯಾವ ಹಂತದಲ್ಲಿದೆ; ತನಿಖೆಯಲ್ಲಿ ಕಂಡು ಬಂದ ಅಂಶಗಳೇನು? (ಪ್ರಕರಣದ ಎಫ್.ಐ.ಆರ್. ಹಾಗೂ ಚಾರ್ಜ್ ಶೀಟ್ ಒದಗಿಸುವುದು)	ಬೆಂಗಳೂರಿನ ಶಿವಾಜಿನಗರದಲ್ಲಿ ದಿನಾಂಕ: 16.10.2016 ರಂದು ನಡೆದ ರುದ್ರೇಶ್ ಕೊಲೆಗೆ ಸಂಬಂಧಿಸಿದಂತೆ ಬೆಂಗಳೂರು ನಗರದ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ದಿನಾಂಕ: 16.10.2016 ರಂದು ಮೊಕದ್ದಮೆ ಸಂಖ್ಯೆ: 124/2016 ಕಲಂ 302 ರೆ/ವಿ 34 ಐ.ಪಿ.ಸಿ. ರೀತ್ಯಾ ಪ್ರಕರಣವು ದಾಖಲಾಗಿರುತ್ತದೆ. ನಂತರ ಸರ್ಕಾರದ ಆದೇಶಾನುಸಾರ ಪ್ರಕರಣವನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.)ಗೆ ವರ್ಗಾಹಿಸಲಾಗಿದ್ದು, ಸದರಿ ಸಂಸ್ಥೆಯು ತನಿಖೆಯನ್ನು ನಡೆಸಿ ಪ್ರಸ್ತುತ ತನಿಖೆ ಪೂರ್ಣಗೊಳಿಸಿದೆ. ಪ್ರಕರಣದ ಆರೋಪಿಗಳ ವಿರುದ್ಧ ದಿನಾಂಕ:21.04.2017 ರಂದು ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಪ್ರಕರಣವು ಸಿ.ಸಿ. ಸಂಖ್ಯೆ: 181/2017 ರಲ್ಲಿ ಹಾಲಿ ವಿಚಾರಣೆಯಲ್ಲಿರುತ್ತದೆ. ಭದ್ರತೆ ಮತ್ತು ಗೌಪ್ಯತೆಯ ಹಿನ್ನೆಲೆಯಲ್ಲಿ ಸದರಿ ತನಿಖೆಯಲ್ಲಿ ಕಂಡು ಬಂದಿರುವ ಅಂಶಗಳು ಮತ್ತು ಚಾರ್ಜ್‌ಶೀಟ್‌ಗಳನ್ನು ಒದಗಿಸಲಾಗಿಲ್ಲ. ಪ್ರಥಮ ವರ್ತಮಾನ ವರದಿಯ (ಎಫ್.ಐ.ಆರ್) ಪ್ರತಿ ಅನುಬಂಧದಲ್ಲಿರುತ್ತದೆ.
ಆ)	ಕರ್ನಾಟಕವನ್ನು ಇಸ್ಲಾಮಿಕ್ ಟೆರರಿಸ್ಟ್ ಠಾಣ ಮಾಡಿಕೊಳ್ಳುತ್ತಿರುವುದಕ್ಕೆ ಈ ರೀತಿಯ ಎಷ್ಟು ಪ್ರಕರಣಗಳು ನಡೆದಿವೆ? ಈ ನಿಟ್ಟಿನಲ್ಲಿ ಸರ್ಕಾರದ ಕ್ರಮಗಳೇನು?	ಕಳೆದ ಐದು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಭಯೋತ್ಪಾದನೆಗೆ ಸಂಬಂಧಿಸಿದಂತೆ 6 ಪ್ರಕರಣಗಳು ವರದಿಯಾಗಿರುತ್ತವೆ. ವಿವರಗಳು ಕೆಳಗಿನಂತೆ ಇರುತ್ತದೆ. 1. On 13.12.2014 – Bangalore City, Gangamanagudi PS Cr.No. 218/2014. 2. On 28.12.2014- Bangalore City, Cubbon Park PS Cr.No. 309/2014. 3. On 10.12.2015 – Rajasthan ATS Crime No. 8/2015 - arrested Mohammed Sirajuddin native of Gulbarga r/o Jaipura, Rajasthan. 4. On 06.01.2016 Special Cell, New Delhi, Case FIR NO. 67/2015- Sayed Anzar Shah, No. 327, 3rd Cross, Hegade Nagar, Bangalore arrested. 5. On 22.01.2016- RC/14/2015/NIA/DLI, New Delhi arrested Muhammed Abdul Ahadd native of K.Narayanapura, Bengaluru. 6. On 01.08.2016 - Mysuru City, Laxmipuram PS Cr.No. 63/2016 & NIA RC/3/2016/HYD. ಮೇಲ್ಕಂಡ ಎಲ್ಲಾ ಪ್ರಕರಣಗಳಲ್ಲಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಸದರಿ ಪ್ರಕರಣಗಳು

		ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. ***ರಾಜ್ಯದಲ್ಲಿ ಭಯೋತ್ಪಾದಕ ಪ್ರಕರಣಗಳನ್ನು ಹತ್ತಿಕ್ಕಲು ಈ ಕೆಳಕಂಡಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.** **1.** ಭಯೋತ್ಪಾದಕ ಚಟುವಟಿಕೆಗಳನ್ನು ನಿಗ್ರಹಿಸಲು ಭಯೋತ್ಪಾದಕ ನಿಗ್ರಹ ದಳವು (ATC) 1992 ರಿಂದ ಕಾರ್ಯ ಪ್ರವೃತ್ತವಾಗಿದೆ. **2.** ದಿನಾಂಕ: 12.12.2008ರಂದು ಭಯೋತ್ಪಾದಕ ಚಟುವಟಿಕೆಯನ್ನು ಪರಿಣಾಮಕಾರಿಯಾಗಿ ನಿಗ್ರಹಿಸಲು ಪ್ರತ್ಯೇಕವಾಗಿ ಆಂತರಿಕ ಭದ್ರತಾ ವಿಭಾಗ (ISD) ರಚನೆಯಾಗಿರುತ್ತದೆ. **3.** ದಿನಾಂಕ: 02.02.2010ರಿಂದ ಗರುಡ ಕಮಾಂಡೋ ಪಡೆಯನ್ನು (CCT) ರಚನೆ ಮಾಡಿದ್ದು, 24x7 ಸಮಯದಲ್ಲಿ ಭಯೋತ್ಪಾದಕ ದಾಳಿಯನ್ನು ಎದುರಿಸಲು ಸನ್ನದ್ಧಗೊಳಿಸಲಾಗಿದೆ. **4.** ದಿನಾಂಕ:14.01.2011 ರಂದು ಪ್ರಮುಖ ಸ್ಥಾವರಗಳ ರಕ್ಷಣೆ ಕುರಿತು ಕರ್ನಾಟಕ ರಾಜ್ಯದ ಕೈಗಾರಿಕಾ ರಕ್ಷಣಾ ಪಡೆಯನ್ನು (KSISF) ರಚಿಸಲಾಗಿದೆ. **5.** ದಿನಾಂಕ: 19.04.2013 ರಂದು ಆಂತರಿಕ ಭದ್ರತಾ ವಿಭಾಗವನ್ನು ಪೊಲೀಸ್ ಠಾಣಾ ಮಟ್ಟಕ್ಕೆ ಉನ್ನತೀಕರಿಸಿ ಭಯೋತ್ಪಾದಕ ಪ್ರಕರಣಗಳನ್ನು ದಾಖಲಿಸುವ ಮತ್ತು ತನಿಖೆ ಕೈಗೊಳ್ಳುವ ಅಧಿಕಾರ ನೀಡಲಾಗಿರುತ್ತದೆ. **6.** 2 ಪ್ಯಾರಾ ಸ್ಪೆಷಲ್ ಫೋರ್ಸ್ ಪಡೆಯನ್ನು ಬೆಂಗಳೂರು ನಗರದಲ್ಲಿ ಭಯೋತ್ಪಾದಕ ದಾಳಿಯ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳಲು ಸ್ಥಾಪಿಸಲಾಗಿದೆ. **7.** ಸೂಕ್ಷ್ಮ ಸ್ಥಾವರಗಳು, ವಿದೇಶಿ ರಾಯಭಾರಿ ಕಚೇರಿಗಳು, ಸಂಸ್ಥೆಗಳು, ಪ್ರಾರ್ಥನಾ ಸ್ಥಳಗಳು, ಜನನಿಬಿಡ ಪ್ರದೇಶಗಳಾದ ಬಸ್ ನಿಲ್ದಾಣ, ರೈಲ್ವೇ ನಿಲ್ದಾಣ, ವ್ಯಾಪಾರ ವಹಿವಾಟು ಕೇಂದ್ರಗಳು ಮುಂತಾದ ಪ್ರದೇಶಗಳಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗುತ್ತಿದೆ. **8.** ಜಿಲ್ಲಾ ಮಟ್ಟದಲ್ಲಿ ಭಯೋತ್ಪಾದಕ ಚಟುವಟಿಕೆಯನ್ನು ನಿಗ್ರಹಿಸಲು ಮತ್ತು ದಾಳಿಯನ್ನು ಎದುರಿಸಲು ಯುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಆಧುನಿಕ ಶಸ್ತ್ರಾಸ್ತ್ರಗಳ ಬಳಕೆ ಹಾಗೂ ಇನ್ನಿತರೆ ವಿಷಯಗಳಿಗೆ ಸೂಕ್ತ ತರಬೇತಿ ನೀಡಲಾಗುತ್ತಿದೆ. **9.** ಜಾಮೀನಿನ ಮೇಲಿರುವ ಹಾಗೂ ಖುಲಾಸೆಗೊಂಡಿರುವ ಆರೋಪಿಗಳ ಚಲನ-ವಲನ ಹಾಗೂ ಅವರ ಕಾರ್ಯ ಚಟುವಟಿಕೆಗಳ ಮೇಲೆ ಸೂಕ್ತ ನಿಗಾ ವಹಿಸಲಾಗಿದೆ. **10.** SMAC (Subsidiary Multi Agency Centre) ಮಾಸಿಕ ಸಭೆಯಲ್ಲಿ ರಾಜ್ಯದ ಮತ್ತು ಕೇಂದ್ರ ಭದ್ರತಾ ಸಂಸ್ಥೆಗಳೊಂದಿಗೆ ಭಯೋತ್ಪಾದನೆ ಪ್ರಕರಣಗಳ ಬಗ್ಗೆ ಮಾಹಿತಿ ಹಾಗೂ ವಿಚಾರಗಳನ್ನು ವಿನಿಮಯ ಮಾಡಿಕೊಂಡು ನಿಗಾ ವಹಿಸಲಾಗುತ್ತಿದೆ.

ಸಂಖ್ಯೆ: ಒಇ 19 ಬೆಳಗಾವಿ 2018

(ಡಾ.ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ

ಕರ್ನಾಟಕ ರಾಜ್ಯ ಪೊಲೀಸ್

ಪ್ರಥಮ ವರ್ತಮಾನ ವರದಿ

(ದಂಡಪ್ರಕ್ರಿಯಾ ಸಂಹಿತೆ ಕಲಂ 154 ರ ಕೆಳಗೆ)

ಘನ ನ್ಯಾಯಾಲಯ : 43rd Addl. CMM Court,Mayohall, Bangalore City

1. ಜಿಲ್ಲೆ : Bengaluru City ವೃತ್ತ/ಉಪ ವಿಭಾಗ : Pulakeshinagar Sub-Divis ಪೊಲೀಸ್ ಠಾಣೆ : Commercial Street PS
   ಅಪರಾಧ ಸಂಖ್ಯೆ : 0124/2016 ಪ್ರ.ವ.ವ.ದಿನಾಂಕ : 16/10/2016

2. ಕಾಯ್ದೆ ಮತ್ತು ಕಲಂಗಳು : IPC 1860 (U/s-302,34)

3. (a) ಕೃತ್ಯ ನಡೆದ ದಿನ : Sunday ದಿನಾಂಕ ದಿಂದ : 16/10/2016 ದಿನಾಂಕ ವರೆಗೆ : 16/10/2016
   ವೇಳೆಯಿಂದ : 12:30:00 ವೇಳೆಯವರೆಗೆ : 12:40:00
   (b) ಠಾಣೆಯಲ್ಲಿ ವರ್ತಮಾನ ಸ್ವೀಕರಿಸಿದ ದಿನಾಂಕ : 16/10/2016 14:15:00 ಬರವಣಿಗೆಯಲ್ಲಿ / ಹೇಳಿಕೆ : Written
   (c) ಪಿರ್ಯಾದುದಾರ / ಬಾತ್ಮೀದಾರ ತಡವಾಗಿ ವರದಿ ಮಾಡಿದಕ್ಕೆ ಕಾರಣಗಳು :
   (d) ಜನರಲ್ ಡೈರಿ ಉಲ್ಲೇಖ ಸಂಖ್ಯೆ ಮತ್ತು ಸಮಯ : 2 , 14:15:00

4. (a) ಕೃತ್ಯ ನಡೆದ ಸ್ಥಳ :
   NEAR SRINIVASA MEDICAL STORE,K KAMARAJ ROAD, SHIVAJINAGARA,
   Bengaluru City, Karnataka,
   (b) ಪೊಲೀಸ್ ಠಾಣೆ ಯಿಂದ ಇರುವ ದಿಕ್ಕು ಮತ್ತು ದೂರ : TOWARDS 0.5 KM NORTH FROM
   (c) ಗ್ರಾಮ : QUADRANT CIRCLE POLICE OUT POST ಗಸ್ತಿನ ಹೆಸರು : 2A
   (d) ಸ್ಥಳವು ಬೇರೆ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವಂತಹದ್ದು ಆದರೆ ಆ ಪೊಲೀಸ್ ಠಾಣೆಯ ಹೆಸರು :
   ಜಿಲ್ಲೆ :

5. ಪಿರ್ಯಾದುದಾರ/ಬಾತ್ಮೀದಾರ :
   (a) ಹೆಸರು : Sri JAYARAM ತಂದೆ / ಗಂಡನ ಹೆಸರು : LATE BHAKTHAVATHSALA
   (b) ವಯಸ್ಸು : 48 (c) ವೃತ್ತಿ :
   (d) ಧರ್ಮ : (e) ಜಾತಿ :
   (f) ಫ್ಯಾಕ್ಸ್ : (g) ಇ-ಮೇಲ್ :
   (h) ದೂರವಾಣಿ : 9535589919 (i)ರಾಷ್ಟ್ರೀಯತೆ : India
   (j) ಪಾಸ್ ಪೋರ್ಟ್ ಸಂಖ್ಯೆ : ನೀಡಿದ ದಿನಾಂಕ :

TRUE COPY

[illegible] ಪಿರ್ಯಾದುದಾರರು [illegible] ತಮ್ಮ ಸ್ನೇಹಿತ ಆರ್. ರುದ್ರೇಶ್ ಬಿನ್ [illegible] 38 ವರ್ಷ, ವಾಸ ನಂ-15/1, 1ನೇ ಮಹಡಿ, 4ನೇ [illegible] ಶಿವಾಜಿನಗರ, ಬೆಂಗಳೂರು ಇವರು ನನಗೆ ಸುಮಾರು 10 ವರ್ಷಗಳಿಂದ ಪರಿಚಯಸ್ಥರು, ಸ್ನೇಹಿತರಾಗಿದ್ದು [illegible] ಈ ದಿನ ದಿನಾಂಕ: 16-10-2016 ರಂದು ಬೆಳಿಗ್ಗೆ ಸುಮಾರು 9-00 ಗಂಟೆಗೆ ಶಿವಾಜಿನಗರ [illegible] ಸುಮಾರು 12-40 ಗಂಟೆಯಲ್ಲಿ ನಾನು ಮತ್ತು ಸ್ನೇಹಿತರಾದ ರುದ್ರೇಶ್ [illegible] ಶಿವಾಜಿನಗರದ ಕಾಮರಾಜ ರಸ್ತೆಯಲ್ಲಿರುವ ಶ್ರೀನಿವಾಸ್ ಮೆಡಿಕಲ್ ಸ್ಟೋರ್ ಬಳಿ [illegible] ಇಬ್ಬರು ಅಪರಿಚಿತ ವ್ಯಕ್ತಿಗಳು ಒಂದು ದ್ವಿ ಚಕ್ರ ವಾಹನದಲ್ಲಿ ಕಮರ್ಷಿಯಲ್ ಸ್ಟ್ರೀಟ್ ಕಡೆಯಿಂದ [illegible] ರುದ್ರೇಶ್ ರವರಿಗೆ [illegible] ದ್ವಿಚಕ್ರವಾಹನದ [illegible] ರುದ್ರೇಶ್ ರವರ ಕುತ್ತಿಗೆಯ ಬಲಭಾಗಕ್ಕೆ ಬಲವಾಗಿ [illegible] ವೇಗವಾಗಿ ಹೋಗಿದ್ದು [illegible] ಆ ವಾಹನದ ನಂಬರ್ ಅನ್ನು ನೋಡಲು ಸಾಧ್ಯವಾಗಲಿಲ್ಲ, ನಾವುಗಳು ರಕ್ತದ ಮಡುವಿನಲ್ಲಿ ಬಿದ್ದಿದ್ದ ರುದ್ರೇಶ್ ರವರನ್ನು ಕೂಡಲೇ ಒಂದು ಆಟೋದಲ್ಲಿ ಬೌರಿಂಗ್ ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ ರುದ್ರೇಶ್ ರವರನ್ನು ವೈದ್ಯರು ಪರೀಕ್ಷಿಸಿ ನೋಡಿ ದಾರಿ ಮಧ್ಯದಲ್ಲಿ ಮೃತ ಹೊಂದಿರುತ್ತಾರೆಂದು ತಿಳಿಸಿದರು. ನನ್ನ ಸ್ನೇಹಿತ ರುದ್ರೇಶ್ ರವರನ್ನು ಇಬ್ಬರು ಅಪರಿಚಿತ ವ್ಯಕ್ತಿಗಳು ವಯಸ್ಸು ಸುಮಾರು 35-40 ವರ್ಷದವರು ಯಾವುದೋ ಕಾರಣಕ್ಕೆ ದ್ವೇಷಗೊಂಡು ಕೊಲೆ ಮಾಡಿರುತ್ತಾರೆ, ಅವರನ್ನು ಪತ್ತೆ ಹಚ್ಚಿ ಕಾನೂನು ಕ್ರಮ ಜರುಗಿಸಬೇಕೆಂದು ಕೊಟ್ಟ ದೂರು ಇತ್ಯಾದಿ.

Lat-77.61113434 Log-12.98374501

11. (a) ತೆಗೆದುಕೊಂಡ ಕ್ರಮ:

Investigation

(b) ಪ್ರ.ವ.ವರದಿಯನ್ನು ಪಿರ್ಯಾದಿಯವರಿಗೆ ಅವರದೆ ಭಾಷೆಯಲ್ಲಿ ವಿವರಿಸಿ, ಓದಿ ಹೇಳಲಾಗಿದೆ ಅದರ ಪ್ರತಿಯನ್ನು ಪುಕಟ್ಟೆಯಾಗಿ ಕೊಡಲಾಗಿದೆ? : Yes

(c) ಪೊಲೀಸ್ ಅಧಿಕಾರಿಯು ತನಿಖೆಗೆ ಸ್ಥಳಕ್ಕೆ ಧಾವಿಸದಿದ್ದಲ್ಲಿ ಅಥವಾ ತನಿಖೆ ಮಾಡಲು ನಿರಾಕರಿಸಿದಲ್ಲಿ ಕಲಂ 157 ಸಿ.ಆರ್.ಪಿ.ಸಿ ಯ ಕಲಂ (ಎ)ಅಥವಾ (ಬಿ)ಯಡಿ ಕಾರಣವನ್ನು ದಾಖಲಿಸಬೇಕು.

YES

12. ಪಿರ್ಯಾದಿಯ ಸಹಿ/ ಹೆಬ್ಬೆರಳಿನ ಗುರುತು

13. ನ್ಯಾಯಾಲಯಕ್ಕೆ ಕಳುಹಿಸಿದ ದಿನಾಂಕ ಮತ್ತು ಸಮಯ : 16/10/2016 15:00:00

TRUE COPY
[illegible] ASI
ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆ
ಬೆಂಗಳೂರು ನಗರ